## ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು

**ಃಸಿಸಿ ಸಂಖ್ಯೆಃ 77ಃ 2018 ಃ**

ಫಿರ್ಯಾದುದಾರರು ಃ ಸರ್ಕಾರದ ಪರವಾಗಿ
ಅಬಕಾರಿ ಉಪ ನಿರೀಕ್ಷಕರು, ಬೇಲೂರು.

ವಿರುದ್ಧ

ಆರೋಪಿಃಗಳು :

ದೇವರಾಜೇಗೌಡ ಬಿನ್ ತಿಮ್ಮೇಗೌಡ, 52 ವರ್ಷ
ವಯಸ್ಸು, ದಬ್ಬೆ ಗ್ರಾಮ, ಅರೇಹಳ್ಳಿ
ಹೋಬಳಿ, ಬೇಲೂರು ತಾಲ್ಲೂಕು.

\- - -

**ಃದೋಷಾರೋಪಣೆಃ**

ಶ್ರೀ ಪ್ರಸನ್ನ ಕುಮಾರ್ ಸಿ. ಬಿ.ಎ.ಎಲ್., ಎಲ್‌ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಬೇಲೂರು ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ-

1) ದಿನಾಂಕಃ 03-12-2016 ರಂದು ಸಂಜೆ 4-15 ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ದಬ್ಬೆ ಗ್ರಾಮದಲ್ಲಿ ಆರೋಪಿಯೂದ ನೀವು, ನಿಮ್ಮ ವಾಸದ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡುವ ಸಲುವಾಗಿ 15 ಲೀಟರ್ ಸಾಮರ್ಥ್ಯದ 3 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀಟರ್‌ನಂತೆ ಒಟ್ಟು 45 ಲೀಟರ್ ಸಾಮರ್ಥ್ಯದ ಬೆಲ್ಲದ ಕೋಳೆಯನ್ನು ಹಾಗೂ 2 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಬಾಟಲಿಯಲ್ಲಿ 2 ಲೀಟರ್‌ಗಳಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಕಾನೂನು ಬಾಹಿರವಾಗಿ ಯಾವುದೇ ಪರವಾನಗಿ ಇಲ್ಲದೇ, ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು, ಕರ್ನಾಟಕ ಅಬ್ಕಾರಿ ಕಾಯ್ದೆ ಕಲಂ. 32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

2) ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡುವ ಸಲುವಾಗಿ 15 ಲೀಟರ್ ಸಾಮರ್ಥ್ಯದ 3 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀಟರ್‌ನಂತೆ ಒಟ್ಟು 45 ಲೀಟರ್ ಸಾಮರ್ಥ್ಯದ ಬೆಲ್ಲದ ಕೋಳೆಯನ್ನು ಹಾಗೂ 2 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಬಾಟಲಿಯಲ್ಲಿ 2 ಲೀಟರ್‌ಗಳಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸ್ವಾಧೀನ ಹೊಂದಲು ನಿಮ್ಮ ವಾಸದ ಮನೆಯನ್ನು ಅನುವು ಮಾಡಿಕೊಂಡಿದ್ದು, ಅದರನ್ವಯ ಕರ್ನಾಟಕ ಅಬ್ಕಾರಿ

ಕಾಯ್ದೆ ಕಲಂ. 38(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

3) ಮೂರನೇಯದಾಗಿ, ಮೇಲ್ಕಂಡ ಅದೇ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು, ನಿಮ್ಮ ವಾಸದ ಮನೆಯಲ್ಲಿ ಅಕ್ರಮವಾಗಿ ಮಾನವ ಜೀವಕ್ಕೆ ಹಾನಿಕರವಾದ ಕಲಬೆರಿಕೆ ಪಾನೀಯವಾದ 15 ಲೀಟರ್ ಸಾಮರ್ಥ್ಯದ 3 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀಟರ್‌ನಂತೆ ಒಟ್ಟು 45 ಲೀಟರ್ ಸಾಮರ್ಥ್ಯದ ಬೆಲ್ಲದ ಕೊಳೆಯನ್ನು ಹಾಗೂ 2 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಬಾಟಲಿಯಲ್ಲಿ 2 ಲೀಟರ್‌ಗಳಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸ್ವಾಧೀನ ಹೊಂದಿದ್ದು, ಕಾರಣ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 272 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

ಮೇಲ್ಕಂಡ ಆರೋಪಿಗೆ ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 29-12-2021

(ಪ್ರಸನ್ನ ಕುಮಾರ್ ಪಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು**

**ಃಸಿಸಿ ಸಂಖ್ಯೆಃ 77ಃ 2018 ಃ ಃ**

ಆರೋಪಿಯ ಹೆಸರು ಃ ದೇವರಾಜೇಗೌಡ
ತಂದೆಃಗಂಡನ ಹೆಸರು ಃ ತಿಮ್ಮೇಗೌಡ
ವಯಸ್ಸು ಃ 52 ವರ್ಷ
ವಾಸ ಸ್ಥಳ ಃ ದಬ್ಬೆ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 29-12-2021

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು